# ಗುಬ್ಬಿ ಮಾಡಿದ ಪಾಯಸ



ಒಂದು ಊರಿನಲ್ಲಿ ವಿಶಾಲವಾದ ಆಲದ ಮರವೊಂದಿತ್ತು. ಅದರ ತುಂಬ ನೂರಾರು ಗುಬ್ಬಚ್ಚಿಗಳು ವಾಸವಾಗಿದ್ದವು. ಒಂದು ಗಂಡು ಗುಬ್ಬಚ್ಚಿ ಮತ್ತು ಒಂದು ಹೆಣ್ಣು ಗುಬ್ಬಚ್ಚಿ ಯಾವಾಗಲೂ ಜೊತೆಜೊತೆಯಾಗಿ ಪ್ರೀತಿಯಿಂದ ಇದ್ದು ಊರ ತುಂಬ ಓಡಾಡಿ ಕಾಳುಗಳನ್ನು ಹೆಕ್ಕಿ ತಿಂದು ರಾತ್ರಿ ಮರದಲ್ಲಿ ವಾಸ ಮಾಡುತ್ತಿದ್ದವು. ಹೀಗಿದ್ದಾಗ ಒಮ್ಮೆ ಹೆಣ್ಣು ಗುಬ್ಬಚ್ಚಿ ಬಸುರಿಯಾಯಿತು. ಅದು ತನಗೆ ಪಾಯಸ ತಿನ್ನಲು ಆಸೆಯಾಗಿದೆಯೆಂದು ಗಂಡು ಗುಬ್ಬಚ್ಚಿಯಲ್ಲಿ ಹೇಳಿಕೊಂಡಿತು. ಆ ಆಸೆಯನ್ನು ಈಡೇರಿಸಲು ತಾವಿಬ್ಬರೂ ಏನು ಮಾಡಬಹುದೆಂದು ಅವು ಕುಳಿತು ಯೋಚನೆ ಮಾಡಿದವು.

ಮರುದಿನ ಗಂಡು ಗುಬ್ಬಚ್ಚಿಯು ಹತ್ತಿರದಲ್ಲಿದ್ದ ಪಾತ್ರೆಯ ಅಂಗಡಿಗೆ ಹೋಗಿ ಒಂದು ಚಿಕ್ಕ ಪಾತ್ರೆಯನ್ನು ತನ್ನ ಕೊಕ್ಕಿನಲ್ಲಿ ಕಚ್ಚಿ ತಂದುಬಿಟ್ಟಿತು. ಮತ್ತೆ ಕಿರಾಣಿ ಅಂಗಡಿಗೆ ಹಾರಿ ಹೋಗಿ ಕೊಕ್ಕಿನಲ್ಲಿ ಸ್ವಲ್ಪ ಹೆಸರುಬೇಳೆಯನ್ನು ತಂದಿತು. ಹಾಗೆಯೇ ಬೆಲ್ಲ, ಕೊಬ್ಬರಿ, ನೀರು ಎಲ್ಲವನ್ನೂ ಸ್ವಲ್ಪ ಸ್ವಲ್ಪವೇ ತಂದಿತು. ಅಷ್ಟರಲ್ಲಿ ಹೆಣ್ಣು ಗುಬ್ಬಚ್ಚಿಯು ಮೂರು ಕಲ್ಲುಗಳಿಂದ ಒಲೆಯನ್ನು ಮಾಡಿ ಮರದ ಒಣ ಕಟ್ಟಿಗೆಗಳನ್ನು ಸೇರಿಸಿತು. ಗಂಡು ಗುಬ್ಬಚ್ಚಿಯು ಬೆಂಕಿಪೊಟ್ಟಣವನ್ನು ತಂದಿತು. ಇಬ್ಬರೂ ಸೇರಿ ಒಲೆ ಉರಿಸಿ ಪಾತ್ರೆ ಇಟ್ಟು ಬೇಳೆ, ಬೆಲ್ಲ, ಕೊಬ್ಬರಿ, ನೀರು ಸೇರಿಸಿ ಪಾಯಸ ಮಾಡಿದವು. ಪಾಯಸದ ಪರಿಮಳ ಸುತ್ತಲೆಲ್ಲ ಹರಡಿತು.

ಗಂಡು ಗುಬ್ಬಿಯು ತರಗಲೆಯ ಸಹಾಯದಿಂದ ಮೆಲ್ಲನೆ ಪಾತ್ರೆಯನ್ನು ಕೆಳಗೆ ಇಳಿಸಿತು. ಪಾಯಸದ ಘಮಘಮ ಪರಿಮಳಕ್ಕೆ ಹೆಣ್ಣು ಗುಬ್ಬಿಗೆ ಬಾಯಲ್ಲಿ ನೀರು ಬಂತು. ಪಾಯಸ ಆರುವ ತನಕ ಕಾಯದೆ ಅದಕ್ಕೆ ಬೇಗನೆ ತಿನ್ನುವ ಆಸೆಯಾಯಿತು. ಅವಸರದಿಂದ ಅದು ಕೂಡಲೇ ಪಾಯಸಕ್ಕೆ ಕೊಕ್ಕು ಹಾಕಿತು. ಬಿಸಿಬಿಸಿ ಪಾಯಸಕ್ಕೆ ನಾಲಗೆ ಸುಟ್ಟ ಹಾಗಾಗಿ ಅದಕ್ಕೆ ನೋವಿನಿಂದ ಅರಚಲೂ ಆಗಲಿಲ್ಲ. ಅದು ಕೂಡಲೇ ನದಿಯ ಕಡೆ ಹಾರಿ ನದಿಯಲ್ಲಿ ತನ್ನ ಕೊಕ್ಕನ್ನು ಮುಳುಗಿಸಿತು. ನಾಲಗೆಯ ಉರಿ ತಾಳಲಾರದೆ ಅದು ತುಂಬ ನೀರು ಕುಡಿಯಿತು. ಕುಡಿದೂ ಕುಡಿದೂ ನದಿಯ ನೀರು ಖಾಲಿಯಾಯಿತು. ಗುಬ್ಬಿಯ ಹೊಟ್ಟೆ ದಪ್ಪಗಾಗಿ ಅದು ಮರದ ಮೇಲೆ ಕುಳಿತು ನೀರನ್ನೆಲ್ಲ ವಾಂತಿ ಮಾಡಿತು. ಅಚ್ಚರಿಯೆಂಬಂತೆ ಆ ನೀರಿನಿಂದ ಊರಲ್ಲಿ ಪ್ರವಾಹ ಉಂಟಾಯಿತು.

ಆ ಊರಲ್ಲಿದ್ದ ಬೇರೆ ಎಲ್ಲ ಹಕ್ಕಿಗಳು ಒಂದೆಡೆ ಸೇರಿ 'ಅಜ್ಜ ಅಜ್ಜಿ ತೇಲಿ ಹೋದರು... ಮನೆಯು ಮಠವೂ ತೇಲಿ ಹೋಯಿತು... ನಗವು ನಾಣ್ಯವೂ ತೇಲಿ ಹೋಯಿತು... ' ಎಂದು ದುಃಖದಿಂದ ಹಾಡತೊಡಗಿದವು. ಆಗ ಹೆಣ್ಣು ಗುಬ್ಬಚ್ಚಿ ತನ್ನಿಂದಾಗಿ ಇಷ್ಟೆಲ್ಲ ಅನರ್ಥವಾಯಿತೆಂದು ಸಂಕಟಪಟ್ಟಿತು. ಗಂಡು ಗುಬ್ಬಚ್ಚಿಗೆ ಅದರ ಸಂಕಟ ನೋಡಲಾಗಲಿಲ್ಲ. ಬಸುರಿ ಸಂಕಟಪಟ್ಟರೆ ಹುಟ್ಟಿದ ಮರಿಯ ಆರೋಗ್ಯ ಚೆನ್ನಾಗಿರುವುದಿಲ್ಲವೆಂದು ಹೇಳಿ ಅದು ಹೆಣ್ಣು ಗುಬ್ಬಚ್ಚಿಗೆ ಸಮಾಧಾನ ಹೇಳಿತು. ಇಬ್ಬರೂ ಸೇರಿ ಪ್ರವಾಹ ನಿಲ್ಲಲು ದೇವರನ್ನು ಬೇಡಿಕೊಂಡವು. ದೇವರು ಪಾಪದ ಹಕ್ಕಿ ಗುಬ್ಬಚ್ಚಿಗಳ ಪ್ರಾರ್ಥನೆ ಕೇಳಿ ಪ್ರವಾಹ ನಿಲ್ಲಿಸಿದ. ಅಷ್ಟರಲ್ಲಿ ಗುಬ್ಬಿಯ ಬಾಯಿ ಉರಿಯೂ ನಿಂತುಹೋಯಿತು. ಹಕ್ಕಿಗಳು ಸಂತೋಷಪಟ್ಟವು. ಎರಡೂ ಗುಬ್ಬಚ್ಚಿಗಳು ಹಾರಿಕೊಂಡು ಪಾಯಸ ಮಾಡಿದ ಸ್ಥಳಕ್ಕೆ ಬಂದವು. ಗಂಡು ಗುಬ್ಬಚ್ಚಿಯು ಪಾಯಸ ಆರಿದ ಬಳಿಕ ಪಾತ್ರೆಯನ್ನು ಮರದ ಮೇಲೆ ಒಂದು ಕಡೆ ಎಲೆಯಿಂದ ಮುಚ್ಚಿ ಇಟ್ಟಿತ್ತು. ಗಂಡು ಗುಬ್ಬಚ್ಚಿಯ ಪ್ರೀತಿಗೆ ಹೆಣ್ಣು ಗುಬ್ಬಚ್ಚಿ ಕೃತಜ್ಞತೆ ಸಲ್ಲಿಸಿತು. ನಂತರ ಅವು ಪಾಯಸವನ್ನು ಇಷ್ಟಪಟ್ಟು ಹೊಟ್ಟೆತುಂಬ ತಿಂದವು. ಬಳಿಕ ಎರಡೂ ಸೇರಿ ಕಸಕಡ್ಡಿಗಳನ್ನು ಹೆಕ್ಕಿ ತಂದು ಬಟ್ಟಲಿನಾಕಾರದ ಚಂದದ ಗೂಡನ್ನು ಕಟ್ಟಿದವು. ಹೆಣ್ಣು ಗುಬ್ಬಚ್ಚಿ ಅದರಲ್ಲಿ ಮೊಟ್ಟೆ ಇಟ್ಟು ಕಾವು ಕೊಟ್ಟು ಮರಿಗಳನ್ನು ಮಾಡಿತು. ಗಂಡು ಗುಬ್ಬಚ್ಚಿ ಅವುಗಳಿಗೆ ಆಹಾರ ತಂದು ಕೊಡುತ್ತಿತ್ತು. ಮುಂದೆ ಅವು ಮರಿಗಳೊಂದಿಗೆ ಸುಖವಾಗಿ ಬಾಳಿದವು.

**■ ಶಾಲಿನಿ ನಾಯಕ್, ಬೆಂಗಳೂರು**